# ಕರ್ನಾಟಕ ಸರಕಾರ

ಗ್ರಾಮಲೆಕ್ಕಿಗರ ನೇರ ನೇಮಕಾತಿ  ಆಯ್ಕೆ ಪ್ರಾಧಿಕಾರ

ಜಿಲ್ಲಾಧಿಕಾರಿಗಳ ಕಚೇರಿ,

ದಕ್ಷಿಣ ಕನ್ನಡ ಜಿಲ್ಲೆ, ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣ

ಮಂಗಳೂರು - 575001

*****

## ಗ್ರಾಮಲೆಕ್ಕಿಗರ  ಹುದ್ದೆಯ  ನೇರ ನೇಮಕಾತಿ  ಸಂಬಂಧ

## ಮಾಹಿತಿ ಸೂಚಿ  - *2016*

**ಕ್ಯಾಲೆಂಡರ್   ಆಫ್ ಇವೆಂಟ್ಸ್ (Calender of Events)**

| ಕ್ರ.ಸಂ | ವಿವರ | ದಿನಾಂಕ |
|---|---|---|
| 1 | ಅರ್ಜಿ ಕರೆಯಲು ನಿಗದಿಪಡಿಸಿದ ದಿನಾಂಕ | **20-07-2016** |
| 2 | ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **20-08-2016** |
| 3 | ಮೂಲದಾಖಲೆಗಳ ಪರಿಶೀಲನೆಗಾಗಿ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸುವ ದಿನಾಂಕ | **27-08-2016** |
| 4 | ತಾತ್ಕಾಲಿಕ ಪರಿಶೀಲನಾ ಪಟ್ಟಿಯಂತೆ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಪರಿಶೀಲನೆಗೆ ಜಿಲ್ಲಾಧಿಕಾರಿಗಳ ಕಚೇರಿಗೆ ಹಾಜರಾಗ ಬೇಕಾದ ದಿನಾಂಕ ಮತ್ತು ಸಮಯ | **14-09-2016** |
| 5 | ಮೂಲಅಂಕಪಟ್ಟಿಯನ್ನು ಸಲ್ಲಿಸಲು ಹಾಜರಾಗಬೇಕಾದ ದಿನ<br>( ವೆಬ್ ಸೈಟ್ ಮೂಲಕ ಹಾಗೂ ನೋಟೀಸು ಮೂಲಕ ತಿಳಿಸಲಾಗುವುದು ) | **20-09-2016** |
| 5 | ಜಿಲ್ಲಾಧಿಕಾರಿ ಕಛೇರಿ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ದಿನಾಂಕ | **26-09-2016** |
| 6 | ವೆಬ್ ಸೈಟ್ ವಿಳಾಸ | http://dk-va.kar.nic.in |
| 7 | ಮಾಹಿತಿಗಾಗಿ ಸಂಪರ್ಕಿಸ ಬಹುದಾದ ಹೆಲ್ಪ್ ಲೈನ್ | **0824-2220590** |

ಕಂದಾಯ ಇಲಾಖೆ

# ಜಿಲ್ಲಾಧಿಕಾರಿಯವರ ಕಚೇರಿ, ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು

## ಅಧಿಸೂಚನೆ

ಇಎಸ್ ಟಿ (2)ಸಿಆರ್.16/2016-17/178305/ಎ2 ದಿನಾಂಕ : 15-07-2016

ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ದಕ್ಷಿಣ ಕನ್ನಡ ಜಿಲ್ಲಾ ಘಟಕದಲ್ಲಿ ಬರುವ ತಾಲೂಕುಗಳಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ರೆವೆನ್ಯೂ ಸಬೊರ್ಡಿನೇಟ್ ಬ್ರಾಂಚ್) (ಕೇಡರ್ ಎಂಡ್ ರಿಕ್ರ್ಯೂಟ್ ಮೆಂಟ್) (ತಿದ್ದುಪಡಿ) ನಿಯಮಗಳು 2008 ಮತ್ತು 2009 ರನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ನೀಡಿರುವ ಅನುಮೋದನೆಯಂತೆ ಜಿಲ್ಲೆಯಲ್ಲಿನ **35** ಖಾಲಿ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಆನ್ ಲೈನ್ ಮೂಲಕ ಆಹ್ವಾನಿಸ ಲಾಗಿದೆ.

| ವಿವರ | ದಿನಾಂಕ | ವೆಬ್ ಸೈಟ್ ವಿಳಾಸ |
|---|---|---|
| ಅರ್ಜಿ ಕರೆಯಲು ನಿಗದಿಪಡಿಸಿದ ದಿನಾಂಕ | **20-07-2016** | **http://dk-va.kar.nic.in** |
| ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **20-08-2016** | |

## ಹುದ್ದೆಗಳ ವರ್ಗೀಕರಣ : ಒಟ್ಟು ಖಾಲಿ ಹುದ್ದೆಗಳು : 35

ಖಾಲಿ ಹುದ್ದೆಗಳು ( ರೋಸ್ಟರ್ ಬಿಂದು ) : 14 ರಿಂದ 48 ರವರೆಗೆ

| ಕ್ರ. ಸಂ | ವರ್ಗೀಕರಣದ ವಿವರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಒಟ್ಟು |
|---|---|---|---|---|---|---|---|---|---|
| 1 | ಸಾಮಾನ್ಯ ಅರ್ಹತೆ | 04 | 05 | 04 | 01 | 02 | 01 | 01 | **18** |
| 2 | ಪರಿಶಿಷ್ಟ ಜಾತಿ | 01 | 02 | 01 | - | 01 | - | - | **05** |
| 3 | ಪರಿಶಿಷ್ಟ ಪಂಗಡ | 01 | - | - | - | - | - | - | **01** |
| 4 | ಪ್ರವರ್ಗ- I | - | - | - | - | - | 01 | - | **01** |
| 5 | ಪ್ರವರ್ಗ- IIA | 01 | 02 | 01 | - | 01 | - | - | **05** |
| 6 | ಪ್ರವರ್ಗ- II B | - | - | - | - | - | 01 | - | **01** |
| 7 | ಪ್ರವರ್ಗ- IIIA | - | - | 01 | - | - | 01 | - | **02** |
| 8 | ಪ್ರವರ್ಗ- III B | - | - | 01 | - | - | - | 01 | **02** |
| | ಒಟ್ಟು ಜುಮ್ಲಾ | **07** | **09** | **08** | **01** | **04** | **04** | **02** | **35** |

1. <u>ಅರ್ಜಿ ಸಲ್ಲಿಸುವ ವಿಧಾನ:-</u> ಅರ್ಜಿಗಳನ್ನು ಆನ್-ಲೈನ್ (Online) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದಾಗಿದೆ. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

2. <u>ಅರ್ಜಿ ಶುಲ್ಕ:-</u>

| | |
|---|---|
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ. ಹಾಗೂ ಪ್ರವರ್ಗ-1 | ರೂ.250=00 |
| ಸಾಮಾನ್ಯ ವರ್ಗ, 2ಎ, 2ಬಿ, 3ಎ, 3ಬಿ ವರ್ಗಕ್ಕೆ | ರೂ.500=00 |

3. <u>ಆನ್-ಲೈನ್ (Online) ಮುಖಾಂತರ ಅರ್ಜಿ ಸಲ್ಲಿಸುವ ವಿಧಾನ</u> :- ಅಭ್ಯರ್ಥಿಯು ಇಲಾಖೆಯ ಅಧಿಕೃತ ವೆಬ್ ಸೈಟ್ **http://dk-va.kar.nic.in** ತೆರೆದು ಕಂಪ್ಯೂಟರ್ ಪರದೆಯ ಮೇಲೆ ಅರ್ಜಿಯನ್ನು ತುಂಬಬೇಕು. ಅಭ್ಯರ್ಥಿಯು Submit Button ಅನ್ನು ಒತ್ತಿದರೆ ಅರ್ಜಿ ಸಂಖ್ಯೆ (Reference Number) ಸೃಷ್ಟಿಯಾಗುತ್ತದೆ. ಆನ್-ಲೈನ್ ಅರ್ಜಿಯನ್ನು ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಸ್ವೀಕೃತಿ ಪತ್ರ (Acknowledgement slip) ಮತ್ತು ದ್ವಿಪ್ರತಿ ಚಲನ್ ನ್ನು ತೆಗೆದುಕೊಳ್ಳತಕ್ಕದ್ದು. ಈ ಚಲನ್ ನ್ನು ಅರ್ಜಿ ಶುಲ್ಕದೊಂದಿಗೆ ಕಾರ್ಪೋರೇಶನ್ ಬ್ಯಾಂಕ್ ಅಥವಾ ಐ.ಸಿ.ಐ.ಸಿ.ಐ ಬ್ಯಾಂಕ್ ಕರ್ನಾಟಕದಲ್ಲಿ ಯಾವುದಾದರೂ ಶಾಖೆಯಲ್ಲಿ ಪಾವತಿಸಬೇಕು. <u>ಅಭ್ಯರ್ಥಿಗಳು ಸ್ವೀಕೃತಿ ಸ್ಲಿಪ್ ನ್ನು ಮತ್ತು ಚಲನ್ ಪಾವತಿಯ ಒಂದು ಪ್ರತಿಯನ್ನು ಕಡ್ಡಾಯವಾಗಿ ತಮ್ಮ ಬಳಿ ಇರಿಸಿಕೊಳ್ಳತಕ್ಕದ್ದು.</u>. <u>ಇನ್ನೊಂದು ಚಲನ್ ಪ್ರತಿ ಬ್ಯಾಂಕ್ ಬಳಿ ಇರುತ್ತದೆ</u>. ಈ ಸಂಪೂರ್ಣ ದಾಖಲೆಗಳನ್ನು ಪರಿಶೀಲನೆಗೆ ಮುಂದೆ ನಿಗದಿಪಡಿಸುವ ದಿನಾಂಕದಂದು ಹಾಜರುಪಡಿಸತಕ್ಕದ್ದು. ಬ್ಯಾಂಕಿನಲ್ಲಿ ನಿಗಧಿತ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ: **20-08-2016** ರಂದೇ ಆಗಿರುತ್ತದೆ. ಶುಲ್ಕ ಪಾವತಿಸುವ ಚಲನ್ ಅನ್ನು ಅಂತಿಮ **ದಿನಾಂಕವಾದ : 20-08-2016** ರ ಸಂಜೆ **5.30** ಒಳಗಾಗಿಯೇ **ಅಪ್ಲೋಡ್** ಮಾಡಬೇಕು. ನಿಗಧಿತ ಅರ್ಜಿ ಶುಲ್ಕ ಹೊರತು ಪಡಿಸಿ ಯಾವುದೇ ವಿಧವಾದ ಬ್ಯಾಂಕ್ ಶುಲ್ಕ ಇತ್ಯಾದಿ ಪಾವತಿಸುವ ಅವಶ್ಯಕತೆ ಇರುವುದಿಲ್ಲ. ಡಿ.ಡಿ, ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಅಲ್ಲದೆ ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರ ಯಾವುದೇ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. <u>ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು</u>.

ಅರ್ಜಿ ಮತ್ತು ಅರ್ಜಿ ಶುಲ್ಕ ಪಾವತಿ ವಸ್ತು ಸ್ಥಿತಿಯ ಬಗ್ಗೆ ಅಭ್ಯರ್ಥಿಗಳು ಆನ್ ಲೈನ್ ನಲ್ಲಿ ಪರಿಶೀಲಿಸಿ Application Status ಖಚಿತಪಡಿಸಿಕೊಳ್ಳುವುದು.

4. <u>ಅರ್ಹತಾ ಷರತ್ತುಗಳು:</u>

ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

ಆ) ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ/ಮಾನಸಿಕ ನ್ಯೂನತೆಯಿಂದ ಮುಕ್ತರಾಗಿರತಕ್ಕದ್ದು.

5.<u>ಶೈಕ್ಷಣಿಕ ವಿದ್ಯಾರ್ಹತೆ :</u>

1.ದ್ವಿತೀಯ ಪಿ.ಯು.ಸಿ. ಪರೀಕ್ಷೆ ಅಥವಾ **CBSE** ಅಥವಾ **ICSE** ನಡೆಸುವ 12ನೇ ತರಗತಿ ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆ ಹೊಂದಿರಬೇಕು.

2. ಕಂಪ್ಯೂಟರ್ ಜ್ಞಾನವುಳ್ಳವರಾಗಿರಬೇಕು.

3.<u>ವೃತ್ತಿಪರ ಕೋರ್ಸು</u> ಹಾಗೂ ಯಾವುದೇ ಇತರೆ <u>ತತ್ಸಮಾನ</u> ವಿದ್ಯಾರ್ಹತೆಗಳನ್ನು " ಮಾಡಿರುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಅಂತವರು ಸಲ್ಲಿಸಿದ್ದಲ್ಲಿ ಸಹ ಪರಿಗಣಿಸಲಾಗುವುದಿಲ್ಲ.

4. ಜೆ.ಓ.ಸಿ ಮತ್ತು <u>ಡಿಪ್ಲೋಮಾ</u> ಇನ್ನಿತರ ಯಾವುದೇ ವಿದ್ಯಾರ್ಹತೆಗಳನ್ನು ಈ ಹುದ್ದೆಗೆ ಪರಿಗಣಿಸಲಾಗುವುದಿಲ್ಲ.

6. <u>ವೇತನ ಶ್ರೇಣಿ: :</u>

ರೂ.11600-200-12000-250-13000-300-14200-350-15600-400-17200-450-19000-500-21000.